ಓ.ಎಸ್. ನಂ. 8/2018 ಪಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 7.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎನ್.ಆರ್ ವಕೀಲರಿಂದಃ**

ನಾನು ಹೆಚ್.ಡಿ.ಕೋಟೆ ಟೌನಿನಲ್ಲಿ ವಾಸವಾಗಿದ್ದು ವ್ಯಾಪಾರ ಮಾಡಿಕೊಂಡಿರುತ್ತೇನೆ. ನನಗೆ ಸಾಕ್ಷಿ ನುಡಿಯಲು ಯಾವುದೇ ಸಮನ್ಸ ಬಂದಿರುವುದಿಲ್ಲ. ನನ್ನನ್ನು ವಾದಿಯು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಅವರು ನನ್ನ ಚಿಕ್ಕಪ್ಪನಾಗಬೇಕು. ವಾದಿಯು ದಾವಆಸ್ತಿಯನ್ನು ಕ್ರಯಪತ್ರ ಮಾಡಿಕೊಡುವಂತೆ ದಾವೆಯನ್ನು ಹೂಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಅದನ್ನು ವಾದಿ ಪರ ವಕೀಲರು ನಾನು ಹೇಳಿದಂತೆ ತಯಾರಿಸಿರುತ್ತಾರೆ. ಕ್ರಯದ ಕರಾರುಪತ್ರವು ಆಗಸ್ಟ್ 2014 ರಲ್ಲಿ ಆಗಿರುತ್ತದೆ. 6 ನೇ ತಾರೀಖಿನಂದು ಆಗಿರಬಹುದು. ಯಾವ ವಾರ ಎಂದು ಈಗ ನೆನಪಿರುವುದಿಲ್ಲ. ಅದನ್ನು ಹಳೆಯ ತಾಲ್ಲೂಕು ಕಛೇರಿ ಬಳಿ ಸಂಜೆ 5 ಗಂಟೆಯಲ್ಲಿ ಬರೆಯಲಾಗಿರುತ್ತದೆ. ಅದನ್ನು ಮಲ್ಲೇಗೌಡ ಎಂಬ ಪತ್ರಬರಹಗಾರರು ಬರೆದಿರುತ್ತಾರೆ. ಅವರು ಮೈಸೂರಿನವರಾಗಿರುತ್ತಾರೆ. ಅವರನ್ನು 1 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. 1 ನೇ ಪ್ರತಿವಾದಿಯ ಪರಿಚಯ ಇದ್ದು ಅವರು ನೂರಲಕುಪ್ಪೆಯಲ್ಲಿ ವಾಸವಾಗಿರುತ್ತಾರೆ. ಹೆಚ್.ಡಿ.ಕೋಟೆಯಲ್ಲಿ ತುಂಬಾ ಜನ ಪತ್ರ ಬರಹಗಾರರು ಇರುತ್ತಾರೆ. ನಿಜವಾಗಿ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದಲ್ಲಿ 1 ನೇ ಪ್ರತಿವಾದಿಯು ಪತ್ರ ಬರಹಗಾರರನ್ನು ಮೈಸೂರಿನಿಂದ ಕರೆಸುತ್ತಿರಲಿಲ್ಲ, ಹೆಚ್.ಡಿ.ಕೋಟೆಯ ಪತ್ರ ಬರಹಗಾರರಿಂದ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ನಿಪಿ1 ದಾಖಲೆಗೆ ಸ್ಟಾಂಪ್ ಪೇಪರನ್ನು 1 ನೇ ಪ್ರತಿವಾದಿ ತಂದಿರುತ್ತಾರೆ, ಎಷ್ಟು ರೂಪಾಯಿನದ್ದು ಎಂದು ನನಗೆ ಗೊತ್ತಿರುವುದಿಲ್ಲ. ಅದನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಲಾಗಿರುತ್ತದೆ. ನಾನು ಸಹಿ ಮಾಡುವ ಪೂರ್ವದಲ್ಲಿ ಅದನ್ನು ತಯಾರಿಸಲಾಗಿತ್ತು. ಅದನ್ನು ನನ್ನ ಸಮಕ್ಷಮ ಟೈಪಿಂಗ್ ಮಾಡಲಾಗಿರುತ್ತದೆ. ಅದನ್ನು ತಾಲ್ಲೂಕು ಕಛೇರಿಯ ಹತ್ತಿರ ಅಂಗಡಿಯಲ್ಲಿ ಟೈಪ್ ಮಾಡಲಾಗಿರುತ್ತದೆ. ಯಾವ ಅಂಗಡಿ ಮತ್ತು ಅದನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಿಪಿ1 ನ್ನು ಟೈಪ್ ಮಾಡಿದಾಗ 3-4 ಜನ ಇದ್ದರು. ಅವರ ಹೆಸರು ಹೇಳಬಹುದಾ ಎಂದರೆ ಇಬ್ಬರು ಸಾಕ್ಷಿದಾರರು ಮತ್ತು ಉಳಿದವರ ಹೆಸರು ಗೊತ್ತಿರುವುದಿಲ್ಲ. ಸದರಿ ದಾಖಲೆಗೆ ನಾನು, ಸೋಮಶೇಖರ ಹಾಗೂ ಪತ್ರಬರಹಗಾರರು ಸಹಿ ಮಾಡಿರುತ್ತೇವೆ. ನನ್ನ ಸಮಕ್ಷಮ 2 ನೇ ಪ್ರತಿವಾದಿಯು ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಇದೇ ಪ್ರಥಮ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ಕ್ಕೆ ಮೊದಲು ಸೋಮಶೇಖರ ರವರು ಸಹಿ ಮಾಡಿದ್ದು ನಂತರ ನಾನು ಸಹಿ ಮಾಡಿರುತ್ತೇನೆ. ನಂತರ 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಸದರಿ ದಿನ ಮುಂಗಡವಾಗಿ 9 ಲಕ್ಷವನ್ನು ಪಡೆದಿರುತ್ತಾರೆ. 500/- ಮತ್ತು 1000/- ರೂ. ಮುಖಬೆಲೆಯ

ಬಂಡಲ್ಲನ್ನು ನೀಡಲಾಗಿರುತ್ತದೆ. ನನಗೆ ಆಸ್ತಿಯ ಸರ್ವೆ ನಂಬರ್ ಗೊತ್ತಿರುವುದಿಲ್ಲ, ಆದರೆ ವಿಸ್ತೀರ್ಣ 8-20 ಎಕರೆ ಆಗಿರುತ್ತದೆ. ಸದರಿ ಆಸ್ತಿಯು ಯಾವ ಊರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಆಸ್ತಿಯ ಮಾತುಕತೆಯಾಗಿರುವುದಿಲ್ಲ. ನಿಪಿ1 ರಂತೆ ಆಸ್ತಿಯ ಕರಾರುಪತ್ರ ಮಾಡಿಕೊಟ್ಟಿರುವುದು ಸುಳ್ಳು, ವಾದಿಯು ನನ್ನ ಚಿಕ್ಕಪ್ಪನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಸಾಲದ ವ್ಯವಹಾರ ಇದ್ದು, 1 ನೇ ಪ್ರತಿವಾದಿಯು 5 ಲಕ್ಷವನ್ನು ಸಾಲವಾಗಿ ಪಡೆದಿದ್ದು ವಾದಿಯು ಅವರಿಂದ ಭದ್ರತೆಗಾಗಿ ಖಾಲಿ ಹಾಳೆಗಳಿಗೆ ಸಹಿ ಮಾಡಿಸಿಕೊಂಡಿದ್ದು, ನಂತರ ನನ್ನನ್ನು ಉಪಯೋಗಿಸಿಕೊಂಡು ನಿಪಿ1 ನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 2017 ರಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡಿದ್ದರೂ ಸಹ ಹೆಚ್ಚಿನ ಬಡ್ಡಿಗಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಕ್ರಯದ ಕರಾರುಪತ್ರವಾಗಿರುವುದಿಲ್ಲ, ನಿಪಿ1 ನ್ನು ನಾನು, ವಾದಿ ಮತ್ತು ಇತರ ಸಾಕ್ಷಿದಾರರು ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ದಾಖಲೆಯನ್ನು ನೋಂದಣಿ ಮಾಡಿರುವುದಿಲ್ಲ. ಕರಾರುಪತ್ರವನ್ನು ನೋಂದಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ. ವಾದಿಯು ವ್ಯವಸಾಯವನ್ನು ಮಾತ್ರ ಮಾಡುತ್ತಾರೆ. ಅವರಿಗೆ ಕೆ.ಆರ್.ಪೇಟೆಯಲ್ಲಿ ಜಮೀನು ಇತ್ತು, ಅದರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಅವರು ನ್ಯಾಯಾಲಯದಲ್ಲಿ ಬೇರೆ ಎಷ್ಟು ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಹೊರತುಪಡಿಸಿ ವಾದಿಯು ಬೇರೆ ದಾವೆಯನ್ನು ಹಾಕಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯು ಬಡ್ಡಿ ವ್ಯವಹಾರ ಮಾಡುತ್ತಿದ್ದು ಹಣಕಾಸಿನ ಅವಶ್ಯಕತೆ ಇರುವವರೆಗೆ ಸಾಲ ನೀಡಿ ಅವರಿಂದ ಖಾಲಿ ಪತ್ರಕ್ಕೆ ಸಹಿ ಪಡೆದು ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡು ನಂತರ ದಾವೆಯನ್ನು ಹೂಡುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಕರಾರುಪತ್ರ ಆಗದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.